**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಮಧುಗಿರಿ.**

ದಿನಾಂಕ 27ನೇ ಜುಲೈ 2026

**ಉಪಸ್ಥಿತರು**

**ಶ್ರೀ ವೆಂಕಟಪ್ಪ ಬಿ.**

ಬಿ.ಎ., ಎಲ್.ಎಲ್.ಎಂ.,

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ., ಮಧುಗಿರಿ**

**ಸಿ.ಸಿ. ಸಂಖ್ಯೆಃ 143/2025**

**ಪಿರ್ಯಾದುದಾರರು** : ರಾಜ್ಯದ ಪರವಾಗಿ ಕೊಡಿಗೇನಹಳ್ಳಿ ಪೊಲೀಸರು
**(ಸರ್ಕಾರಿ ಅಭಿಯೋಜಕರು ಪ್ರತಿನಿಧಿಸುವರು)**

**ವಿರುದ್ಧ**

**ಆರೋಪಿಗಳು** : ನರೇಶ್ ಬಿನ್ ಲೇಟ್ ಲಕ್ಷ್ಮೀನರಸಪ್ಪ
ವಯಸ್ಸು 30 ವರ್ಷ,
ವಾಸಃ ಕಸಿನಾಯಕನಹಳ್ಳಿ ಗ್ರಾಮ,
ಕೊಡಿಗೇನಹಳ್ಳಿ ಹೋಬಳಿ,
ಮಧುಗಿರಿ ತಾಲ್ಲೂಕು,
ತುಮಕೂರು ಜಿಲ್ಲೆ.
**(ಪ್ರತಿನಿಧಿಸುವವರುಃಶ್ರೀ. ಟಿ.ಎನ್.ಜೆ., ವಕೀಲರು)**

| | | |
|---|---|---|
| ಕೃತ್ಯ ನಡೆದ ದಿನಾಂಕ | : | **15-12-2024** |
| ದೂರು ನೀಡಿದ ದಿನಾಂಕ | : | **15-12-2024** |

| | | |
|---|---|---|
| ಆರೋಪಿ ದಸ್ತಗಿರಿಯಾದ ದಿನಾಂಕ | : | - |
| ಆರೋಪಿ ಬಿಡುಗಡೆಯಾದ ದಿನಾಂಕ | : | - |
| ಆರೋಪಿ ನ್ಯಾಯಾಂಗ ಬಂಧನದ ಅವಧಿ | : | - |
| ಅಪರಾಧ ಸಂಖ್ಯೆಗಳು | : | ಭಾರತೀಯ ನ್ಯಾಯ ಸಂಹಿತೆ ಕಲಂ **126(2), 352, 118(1), 351(2)** |
| ವಿಚಾರಣೆ ಪ್ರಾರಂಭವಾದ ದಿನಾಂಕ | : | **24-07-2026** |
| ವಿಚಾರಣೆ ಮುಕ್ತಾಯವಾದ ದಿನಾಂಕ | : | **24-07-2026** |
| ತೀರ್ಪು | : | ಆರೋಪಿಯನ್ನು ಬಿಡುಗಡೆ ಮಾಡಲಾಗಿದೆ |

****

**<u>ತೀರ್ಪು</u>**

ಕೊಡಿಗೇನಹಳ್ಳಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿ ವಿರುದ್ದ ಭಾರತೀಯ ನ್ಯಾಯ ಸಂಹಿತೆ ಕಲಂ. **126(2), 352, 118(1), 351(2)** ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿರುತ್ತಾರೆ.

2. **ಅಭಿಯೋಜನೆಯವರ ಪ್ರಕರಣದ ಸಾರಾಂಶವೇನೆಂದರೆಃ-**

ದಿನಾಂಕ 15-12-2024 ರಂದು ಸಂಜೆ 04-30 ಗಂಟೆ ಸಮಯದಲ್ಲಿ ಕೊಡಿಗೇನಹಳ್ಳಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕಸಿನಾಯಕನಹಳ್ಳಿ ಗ್ರಾಮದ ನಾರಾಯಣಪ್ಪರವರ ಖಾಲಿ ನಿವೇಶನ ಮತ್ತು ರಾಮಲಕ್ಷ್ಮಮ್ಮ ರವರ ಖಾಲಿ ನಿವೇಶನದ ಮಧ್ಯೆ ಹಾದು ಹೋಗಿರುವ ಸಿಸಿ ರಸ್ತೆಯಲ್ಲಿ ಚಾಸಾ-2 ರವರು ದ್ವಿಚಕ್ರ

ವಾಹನದ ಹಿಂಬದಿಯಲ್ಲಿ ಚಾಸಾ-3 ರವರನ್ನು ಕೂರಿಸಿಕೊಂಡು ಮನೆಯ ಕಡೆಗೆ ಹೋಗುತ್ತಿದ್ದಾಗ ಆರೋಪಿಯು ಹಳೆಯ ದ್ವೇಷದಿಂದ ದ್ವಿಚಕ್ರ ವಾಹನವನ್ನು ಅಡ್ಡಗಟ್ಟಿ ತಡೆದು ಚಾಸಾ-2 ಮತ್ತು 3 ರವರಿಗೆ ಬೋಳಿ ಮಕ್ಕಳಾ, ಸೂಳೆ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ಆರೋಪಿಯು ಚಾಸಾ-2 ರವರ ಬಲಗೈಗೆ ಮತ್ತು ಎಡಗೈಗೆ ಸ್ಟೀಲ್ ರಾಡಿನಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು ಮತ್ತು ಚಾಸಾ-3 ರವರಿಗೆ ಸ್ಟೀಲ್ ರಾಡಿನಿಂದ ತಲೆಗೆ, ಭುಜಕ್ಕೆ ಮತ್ತು ಎಡಕಾಲಿಗೆ ಹೊಡೆದು ರಕ್ತಗಾಯ ಪಡಿಸಿದ್ದು ಹಾಗೂ ಆರೋಪಿಯು ಚಾಸಾ-2 ಮತ್ತು 3ರವರಿಗೆ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಚಾಸಾ-1ರವರು ದೂರು ನೀಡಿದ ಆಧಾರದ ಮೇಲೆ ಕೊಡಿಗೇನಹಳ್ಳಿ ಪೊಲೀಸರು ತಮ್ಮ ಠಾಣಾ ಮೊಕದ್ದಮೆ ಸಂಖ್ಯೆ **166/2024** ರಂತೆ ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ. **126(2), 352, 118(1)** ಮತ್ತು **351(2)** ರಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಪ್ರಕರಣ ದಾಖಲಿಸಿ, ಈ ಕೇಸಿನ ತನಿಖಾಧಿಕಾರಿಯವರು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಸ್ಥಳ ಪಂಚನಾಮೆ ಮಾಡಿ, ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ಆರೋಪಿಗೆ ಸಮನ್ಸ್ ಜಾರಿಗೊಳಿಸಿದ್ದು ಆರೋಪಿ ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ. ಭಾರತೀಯ ನ್ಯಾಯ ಸಂಹಿತೆ ಕಲಂ.**203**ರ ಅಡಿಯಲ್ಲಿ ಅಭಿಯೋಜನೆಯ ಕಡತದ ಪ್ರತಿಗಳನ್ನು ಆರೋಪಿಗೆ ಒದಗಿಸಿ ಉಭಯ ಪಕ್ಷಗಾರರ

ವಾದವನ್ನು ಆಲಿಸಿ ಭಾರತೀಯ ನ್ಯಾಯ ಸಂಹಿತೆ ಕಲಂ. **126(2), 352, 118(1), 351(2)** ರಡಿಯಲ್ಲಿ ಆರೋಪಣೆಯನ್ನು ರಚಿಸಲಾಯಿತು ಮತ್ತು ಭಾರತೀಯ ನ್ಯಾಯ ಸಂಹಿತೆ ಕಲಂ. **126(2), 352, 118(1), 351(2)** ರಡಿಯಲ್ಲಿ ರಚಿಸಲಾದ ಆರೋಪವನ್ನು ಆರೋಪಿಗೆ ಓದಿ ಹೇಳಲಾಗಿ ಆರೋಪಿ ತಾನು ಯಾವುದೇ ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕೆಂದು ಕೋರಿಕೊಂಡಿರುತ್ತಾರೆ. ಆದಕಾರಣ ಪ್ರಕರಣದ ವಿಚಾರಣೆಯನ್ನು ಮುಂದುವರಿಸಲಾಯಿತು.

4. ಅಭಿಯೋಜನೆಯವರ ಪರವಾಗಿ ಸಾಕ್ಷಿದಾರರಾದ ಚೌಡಮ್ಮ ರವರನ್ನು ಪ್ರಾಸಾ-1 ಎಂದು, ಕಿರಣ್ ರವರನ್ನು ಪ್ರಾಸಾ-2 ಎಂದು ಮತ್ತು ರಾಮಚರಣ್ ರವರನ್ನು ಪ್ರಾಸಾ-3 ಎಂದು ವಿಚಾರಣೆ ಮಾಡಿ ನಿಪಿ-1 ರಿಂದ ನಿಪಿ-4 ದಸ್ತಾವೇಜುಗಳನ್ನು ಗುರುತಿಸಲಾಗಿದೆ. ಸದರಿ ಮೊಕದ್ದಮೆಯಲ್ಲಿ ಪ್ರಾಸಾ-1 ರಿಂದ 3 ರವರು ಅಭಿಯೋಜನೆಯ ಮೊಕದ್ದಮೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಉಳಿದ ಸಾಕ್ಷಿಗಳಿಗೆ ಸಮನ್ಸ್ ಹೊರಡಿಸುವಂತೆ ಕೋರಿದರು. ಆದರೆ ಪ್ರಕರಣದ ಪ್ರಾಸಾ-1 ರಿಂದ 3 ರವರು ಅಭಿಯೋಜನೆಯವರ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ಪರಿಗಣಿಸಿ ಉಳಿದ ಸಾಕ್ಷಿದಾರರನ್ನು ವಿಚಾರಣೆಯಿಂದ ಕೈಬಿಡಲಾಯಿತು ಹಾಗೂ ಆರೋಪಿ ಹೇಳಿಕೆಗೆ ವಿನಾಯಿತಿ ನೀಡಲಾಗಿರುತ್ತದೆ.

5. ಉಭಯ ಪಕ್ಷಗಾರರ ವಾದ ವಿವಾದಗಳನ್ನು ಕೇಳಲಾಯಿತು ಹಾಗೂ ಪ್ರಕರಣದ ಕಡತ ಪರಿಶೀಲಿಸಲಾಯಿತು.

6. ಮೇಲ್ಕಂಡ ಸಂಗತಿಗಳಿಂದ ಕೆಳಕಂಡ ಅಂಶಗಳು ತೀರ್ಮಾನಕ್ಕೆ ಉದ್ಭವಿಸುತ್ತದೆಃ

**ಅಂಶಗಳು**

**ಅಂಶ-1** : ದಿನಾಂಕ 15-12-2024 ರಂದು ಸಂಜೆ 04-30 ಗಂಟೆ ಸಮಯದಲ್ಲಿ ಕೊಡಿಗೇನಹಳ್ಳಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕಸಿನಾಯಕನಹಳ್ಳಿ, ಗ್ರಾಮದ ನಾರಾಯಣಪ್ಪರವರ ಖಾಲಿ ನಿವೇಶನ ಮತ್ತು ರಾಮಲಕ್ಷ್ಮಮ್ಮ ರವರ ಖಾಲಿ ನಿವೇಶನದ ಮಧ್ಯೆ ಹಾದು ಹೋಗಿರುವ ಸಿಸಿ ರಸ್ತೆಯಲ್ಲಿ ಚಾಸಾ-2 ರವರು ದ್ವಿಚಕ್ರ ವಾಹನದ ಹಿಂಬದಿಯಲ್ಲಿ ಚಾಸಾ-3 ರವರನ್ನು ಕೂರಿಸಿಕೊಂಡು ಮನೆಯ ಕಡೆಗೆ ಹೋಗುತ್ತಿದ್ದಾಗ ಆರೋಪಿಯು ಹಳೆಯ ದ್ವೇಷದಿಂದ ದ್ವಿಚಕ್ರ ವಾಹನವನ್ನು ಅಡ್ಡಗಟ್ಟಿ ತಡೆದಿದ್ದು, ಆ ಮೂಲಕ ಆರೋಪಿ ಭಾರತೀಯ ನ್ಯಾಯ ಸಂಹಿತೆ ಕಲಂ.126(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸಂಶಯತೀತವಾಗಿ ಸಾಬೀತುಪಡಿಸುತ್ತದೆಯೇ ?

**ಅಂಶ-2** : ಮೇಲೆ ಹೇಳಿದ ಸಮಯ, ಸ್ಥಳ ಹಾಗೂ ದಿನಾಂಕದಂದು ಆರೋಪಿ ಚಾಸಾ-2 ಮತ್ತು 3 ರವರನ್ನು ಅಡ್ಡಗಟ್ಟಿ ತಡೆದಿದ್ದಲ್ಲದೇ ಚಾಸಾ-2 ಮತ್ತು 3 ರವರಿಗೆ ಬೋಳಿ ಮಕ್ಕಳಾ, ಸೂಳೆ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಆರೋಪಿ ಭಾರತೀಯ ನ್ಯಾಯ ಸಂಹಿತೆ

ಕಲಂ.352ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸಂಶಯತೀತವಾಗಿ ಸಾಬೀತುಪಡಿಸುತ್ತದೆಯೇ ?

**ಅಂಶ-3** : ಮೇಲೆ ಹೇಳಿದ ಸಮಯ, ಸ್ಥಳ ಹಾಗೂ ದಿನಾಂಕದಂದು ಆರೋಪಿ ಚಾಸಾ-2 ಮತ್ತು 3 ರವರ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ ಚಾಸಾ-2 ರವರ ಬಲಗೈಗೆ ಮತ್ತು ಎಡಗೈಗೆ ಸ್ಟೀಲ್ ರಾಡಿನಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು ಮತ್ತು ಚಾಸಾ-3 ರವರಿಗೆ ಅದೇ ಸ್ಟೀಲ್ ರಾಡಿನಿಂದ ತಲೆಗೆ, ಭುಜಕ್ಕೆ ಮತ್ತು ಎಡಕಾಲಿಗೆ ಹೊಡೆದು ರಕ್ತ ಗಾಯ ಪಡಿಸಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.118(1) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸಂಶಯತೀತವಾಗಿ ಸಾಬೀತುಪಡಿಸುತ್ತದೆಯೇ ?

**ಅಂಶ-4** : ಮೇಲೆ ಹೇಳಿದ ಸಮಯ, ಸ್ಥಳ ಹಾಗೂ ದಿನಾಂಕದಂದು ಆರೋಪಿ ಚಾಸಾ-2 ಮತ್ತು 3 ರವರಿಗೆ ಸ್ಟೀಲ್ ರಾಡಿನಿಂದ ಹೊಡೆದು ರಕ್ತಗಾಯ ಪಡಿಸಿದ್ದಲ್ಲದೇ, ಇಷ್ಟಕ್ಕೆ ನಿಮ್ಮನ್ನು ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿ ಭಾರತೀಯ ನ್ಯಾಯ ಸಂಹಿತೆ ಕಲಂ.351(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸಂಶಯತೀತವಾಗಿ ಸಾಬೀತುಪಡಿಸುತ್ತದೆಯೇ

**ಅಂಶ-5** : ಮಾಡುವ ಆದೇಶ ?

7. ಮೇಲಿನ ಅಂಶಗಳಿಗೆ ನಾನು ಕೆಳಗೆ ನೀಡಿರುವ ಕಾರಣಗಳಿಂದಾಗಿ ಕೆಳಕಂಡಂತೆ ಉತ್ತರಿಸುತ್ತೇನೆ.

**ಅಂಶ-1** : ನಕಾರಾತ್ಮಕವಾಗಿ

**ಅಂಶ-2** : ನಕಾರಾತ್ಮಕವಾಗಿ

**ಅಂಶ-3** : ನಕಾರಾತ್ಮಕವಾಗಿ

**ಅಂಶ-4** : ನಕಾರಾತ್ಮಕವಾಗಿ

**ಅಂಶ-5** : ಅಂತಿಮ ಆದೇಶದಂತೆ,
ಈ ಕೆಳಕಂಡ ಕಾರಣಗಳಿಗಾಗಿ

## ಕಾರಣಗಳು

8. **ಅಂಶ-1 ರಿಂದ ಅಂಶ-4 :** ಸಂಗತಿಗಳ ಪುನರಾವರ್ತನೆಯನ್ನು ತಪ್ಪಸಲು ಅಂಶ-1 ರಿಂದ ಅಂಶ-4ನ್ನು ಒಟ್ಟಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

9. ಅಭಿಯೋಜನೆಯು ಪ್ರಾಸಾ-1 ಚೌಡಮ್ಮ ಕೋಂ ರಮೇಶ್ ಎಂಬುವವರನ್ನು, ಈ ಘಟನೆಗೆ ಸಂಬಂಧಪಟ್ಟಂತೆ ದೂರುದಾರರಾಗಿ ವಿಚಾರಣೆ ಮಾಡಿದ್ದು ಈ ಸಾಕ್ಷಿಯು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ತನ್ನ ಸಾಕ್ಷ್ಯ ವಿಚಾರಣೆಯಲ್ಲಿ ಆರೋಪಿ ತನಗೆ ಗೊತ್ತು, ಚಾಸಾ-2 ನನ್ನ ಮಗ, ಚಾಸಾ-3 ನನ್ನ ಸಂಬಂಧಿಕರು, ಆರೋಪಿ ಎಂದೂ ಸಹ ಚಾಸಾ-2 ಮತ್ತು 3 ರವರನ್ನು ಅಡ್ಡಗಟ್ಟಿ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಚಾಸಾ-2ರವರಿಗೆ ಸ್ಟೀಲ್ ರಾಡಿನಿಂದ ಬಲಗೈ ಮತ್ತು ಎಡಗೈಗೆ ಹೊಡೆದು ನೋವುಂಟು ಪಡಿಸಿರುವುದಿಲ್ಲ ಹಾಗೂ ಚಾಸಾ-3ರವರಿಗೆ ಅದೇ ಸ್ಟೀಲ್ ರಾಡಿನಿಂದ ತಲೆಗೆ, ಭುಜಕ್ಕೆ ಮತ್ತು ಎಡಕಾಲಿಗೆ ಹೊಡೆದು ರಕ್ತ ಗಾಯ

ಪಡಿಸಿರುವುದಿಲ್ಲ ಹಾಗೂ ಜೀವ ಬೆದರಿಕೆ ಹಾಕಿರುವುದಿಲ್ಲ, ಈ ಸಂಬಂಧವಾಗಿ ಚಾಸಾ-2 ಮತ್ತು 3 ರವರು ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೇ ನಿಶಾನೆ ಪಿ-1ರಂತಹ ದೂರಿನಲ್ಲಿರುವ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಆದರೆ ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ, ನ್ಯಾಯಾಲಯದ ಮುಂದಿರುವ ಸ್ಟೀಲ್ ರಾಡನ್ನು ಯಾವ ಉದ್ದೇಶಕ್ಕಾಗಿ ಅಮಾನತ್ತು ಪಡಿಸಿಕೊಂಡರು ಎಂಬುದು ತನಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪ್ರಾಸಾ-1ರವರನ್ನು ಪಾಟೀ ಸವಾಲು ಮಾಡಿದ್ದರೂ ಸಹ ಪ್ರಾಸಾ-1ರವರು ಆರೋಪಿ ಚಾಸಾ-2 ಮತ್ತು 3 ರವರನ್ನು ಅಡ್ಡಗಟ್ಟಿ ತಡೆದು ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-2ರವರಿಗೆ ಸ್ಟೀಲ್ ರಾಡಿನಿಂದ ಬಲಗೈ ಮತ್ತು ಎಡಗೈಗೆ ಹೊಡೆದು ನೋವುಂಟು ಪಡಿಸಿ ಹಾಗೂ ಚಾಸಾ-3ರವರಿಗೆ ಅದೇ ಸ್ಟೀಲ್ ರಾಡಿನಿಂದ ತಲೆಗೆ, ಭುಜಕ್ಕೆ ಮತ್ತು ಎಡಕಾಲಿಗೆ ಹೊಡೆದು ರಕ್ತ ಗಾಯ ಪಡಿಸಿ, ಜೀವ ಬೆದರಿಕೆ ಹಾಕಿರುತ್ತಾರೆ ಎಂಬ ಅಂಶವನ್ನು ಈ ಸಾಕ್ಷಿಯ ಮೂಲಕ ನುಡಿಸಲು ವಿಫಲರಾಗಿರುತ್ತಾರೆ. ಅದೇ ರೀತಿ ತಾನು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಆದರೆ ನಿಶಾನೆ ಪಿ-2ರಂತಹ ದಾಖಲೆ ಈ ಸಾಕ್ಷಿಯ ಹೇಳಿಕೆಯಾಗಿದ್ದು, ಈ ಸಾಕ್ಷಿಯ ಸಾಕ್ಷ್ಯ ನಿಪಿ-2ರಂತಹ ದಾಖಲೆಯಲ್ಲಿ ಹೇಳಲಾದ ಅಂಶಗಳು ಒಂದಕ್ಕೊಂದು ವ್ಯತ್ಯಾಸದಿಂದ ಕೂಡಿರುತ್ತವೆ. ಅಲ್ಲದೇ ತಾನು, ಚಾಸಾ-2 ಮತ್ತು 3 ರವರು ಹಾಗೂ ಆರೋಪಿ ನ್ಯಾಯಾಲಯದ ಹೊರಗೆ ರಾಜೀ ಮಾಡಿಕೊಂಡಿರುವ ಅಂಶವನ್ನು ಒಪ್ಪಿರುತ್ತಾರೆ.

10. ಅಭಿಯೋಜನೆಯು ಪ್ರಾಸಾ-2 ಕಿರಣ್ ಬಿನ್ ರಮೇಶ್ ಮತ್ತು ಪ್ರಾಸಾ-3 ರಾಮ್ ಚರಣ್ ಬಿನ್ ರಾಮಕೃಷ್ಣಪ್ಪ ಎಂಬುವವರನ್ನು, ಈ ಘಟನೆಗೆ ಸಂಬಂಧಪಟ್ಟಂತೆ ಗಾಯಾಳುಗಳಾಗಿ ವಿಚಾರಣೆ ಮಾಡಿದ್ದು ಈ ಇಬ್ಬರೂ ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ತಮ್ಮ ಸಾಕ್ಷ್ಯ ವಿಚಾರಣೆಯಲ್ಲಿ ಆರೋಪಿ ತಮಗೆ ಗೊತ್ತು, ಆರೋಪಿ ಎಂದೂ ಸಹ ತಮ್ಮನ್ನು ಅಡ್ಡಗಟ್ಟಿ ತಡೆದು ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಚಾಸಾ-2 ಆದ ತನಗೆ ಸ್ಟೀಲ್ ರಾಡಿನಿಂದ ಬಲಗೈ ಮತ್ತು ಎಡಗೈಗೆ ಹೊಡೆದು ನೋವುಂಟು ಪಡಿಸಿರುವುದಿಲ್ಲ ಹಾಗೂ ಚಾಸಾ-3 ಆದ ನನಗೆ ಅದೇ ಸ್ಟೀಲ್ ರಾಡಿನಿಂದ ತಲೆಗೆ, ಭುಜಕ್ಕೆ ಮತ್ತು ಎಡಕಾಲಿಗೆ ಹೊಡೆದು ರಕ್ತಗಾಯ ಪಡಿಸಿರುವುದಿಲ್ಲ ಹಾಗೂ ಜೀವ ಬೆದರಿಕೆ ಹಾಕಿರುವುದಿಲ್ಲ, ಈ ಸಂಬಂಧವಾಗಿ ತಾವು ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ, ನ್ಯಾಯಾಲಯದ ಮುಂದಿರುವ ಸ್ಟೀಲ್ ರಾಡನ್ನು ಯಾವ ಉದ್ದೇಶಕ್ಕಾಗಿ ಅಮಾನತ್ತು ಪಡಿಸಿಕೊಂಡರು ಎಂಬುದು ತಮಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪ್ರಾಸಾ-2 ಮತ್ತು 3 ರವರನ್ನು ಪಾಟೀ ಸವಾಲು ಮಾಡಿದ್ದರೂ ಸಹ ಪ್ರಾಸಾ-2 ಮತ್ತು 3ರವರು ಆರೋಪಿ ತಮ್ಮನ್ನು ಅಡ್ಡಗಟ್ಟಿ ತಡೆದು ಅವಾಚ್ಯ ಶಬ್ದಗಳಿಂದ ಬೈದು, ಸ್ಟೀಲ್ ರಾಡಿನಿಂದ ಬಲಗೈ, ಎಡಗೈಗೆ, ತಲೆಗೆ, ಭುಜಕ್ಕೆ ಮತ್ತು ಎಡಕಾಲಿಗೆ ಹೊಡೆದು ರಕ್ತ ಗಾಯ ಪಡಿಸಿ, ಜೀವ ಬೆದರಿಕೆ ಹಾಕಿರುತ್ತಾರೆ ಎಂಬ ಅಂಶವನ್ನು ಈ ಸಾಕ್ಷಿದಾರರ ಮೂಲಕ ನುಡಿಸಲು ವಿಫಲರಾಗಿರುತ್ತಾರೆ. ಅದೇ ರೀತಿ ಈ

ಸಂಬಂಧವಾಗಿ ತಾವು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಆದರೆ ನಿಪಿ-3 ಮತ್ತು ನಿಪಿ-4ರಂತಹ ದಾಖಲೆಗಳು ಈ ಸಾಕ್ಷಿದಾರರ ಹೇಳಿಕೆಗಳಾಗಿದ್ದು, ಈ ಸಾಕ್ಷಿದಾರರ ಸಾಕ್ಷ್ಯ ನಿಪಿ-3 ಮತ್ತು 4ರಂತಹ ದಾಖಲೆಗಳಲ್ಲಿ ಹೇಳಲಾದ ಅಂಶಗಳು ಒಂದಕ್ಕೊಂದು ವ್ಯತ್ಯಾಸದಿಂದ ಕೂಡಿರುತ್ತವೆ. ಅಲ್ಲದೇ ತಾವು, ಚಾಸಾ-1ರವರು ಹಾಗೂ ಆರೋಪಿ ನ್ಯಾಯಾಲಯದ ಹೊರಗೆ ರಾಜೀ ಮಾಡಿಕೊಂಡಿರುವ ಅಂಶವನ್ನು ಒಪ್ಪಿರುತ್ತಾರೆ.

11. ಪ್ರಸ್ತುತ ಪ್ರಕರಣದಲ್ಲಿ ಪ್ರಾಸಾ-1 ರವರು ದೂರುದಾರರು ಹಾಗೂ ಪ್ರಾಸಾ-2 ಮತ್ತು 3ರವರು ಗಾಯಾಳುಗಳಾಗಿ ವಿಚಾರಣೆ ಮಾಡಿದ್ದು, ಈ ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೇ ತಾವು ಮತ್ತು ಆರೋಪಿತರು ಪರಿಚಯಸ್ಥರಾಗಿದ್ದು, ನ್ಯಾಯಾಲಯದ ಹೊರಗೆ ರಾಜೀ ಮಾಡಿಕೊಂಡಿರುವ ಅಂಶವನ್ನು ಒಪ್ಪಿರುತ್ತಾರೆ. ಈ ಅಂಶವನ್ನು ಪರಿಶೀಲಿಸಿದಾಗ ಉಭಯ ಪಕ್ಷಗಾರರು ಸಹ ಪರಸ್ಪರ ನ್ಯಾಯಾಲಯದ ಹೊರಗೆ ರಾಜೀ ಮಾಡಿಕೊಂಡಿರುತ್ತೇವೆ ಎಂಬುದಾಗಿ ಒಪ್ಪಿರುತ್ತಾರೆ. ಈ ಬಗ್ಗೆ ಕಾನೂನಿನಲ್ಲಿ ಅವಕಾಶವಿರುವುದರಿಂದ ರಾಜಿಗೆ ಅವಕಾಶ ನೀಡಲಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ಅಭಿಯೋಜನೆಯು ಫಿರ್ಯಾದಿ, ಸ್ಥಳ ಪಂಚನಾಮೆ ಮತ್ತು ಸಾಕ್ಷಿದಾರರ ಹೇಳಿಕೆಗಳಲ್ಲಿ ಹೇಳಲಾದ ಅಂಶಗಳನ್ನು ಈ ಸಾಕ್ಷಿದಾರರ ಸಾಕ್ಷ್ಯದ ಮೂಲಕ ಸಾಬೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಅಭಿಯೋಜನೆಯ ಸಾಕ್ಷ್ಯದಲ್ಲಿ ಆರೋಪಿ ಮೇಲೆ ಆರೋಪಿಸಿದ ಅಪರಾಧ ಮಾಡಿದ್ದಾರೆಂದು ತೋರ್ಪಡಿಸುವ ಯಾವುದೇ ಸಾಕ್ಷ್ಯಗಳು ಇಲ್ಲದೇ

ಇರುವ ಕಾರಣ ಅಭಿಯೋಜನೆಯು ಆರೋಪಿ ವಿರುದ್ಧ ಆರೋಪಿಸಿದ ಆಪಾದನೆಗಳನ್ನು ನಿಸ್ಸಂಶಯಾತೀತವಾಗಿ ಸಾಬೀತುಪಡಿಸುವಲ್ಲಿ ವಿಫಲವಾಗಿದೆ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿಗೆ ನೀಡಿ ಅಂಶ-1 ರಿಂದ ಅಂಶ-4ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

12. **ಅಂಶ-5:** ಮೇಲ್ಕಂಡಂತೆ ಚರ್ಚಿಸಿದ ಕಾರಣಗಳಿಗೆ, ಈ ನ್ಯಾಯಾಲಯ ಈ ಕೆಳಕಂಡಂತೆ ಆದೇಶವನ್ನು ಮಾಡಿರುತ್ತದೆ.

## ಆದೇಶ

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.**271(1)** ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಆರೋಪಿತರನ್ನು ಭಾರತೀಯ ನ್ಯಾಯ ಸಂಹಿತೆ ಕಲಂ.**126(2), 118(1), 352, 351(2),** ರಡಿಯಲ್ಲಿ ಅಪರಾಧಗಳ ಆರೋಪದಿಂದ ನಿರ್ದೋಷಿಗಳೆಂದು ನಿರ್ಣಯಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರ ಜಾಮೀನು ಮುಚ್ಚಳಿಕೆ ಮತ್ತು ಜಾಮೀನು ಭದ್ರತೆಗಳನ್ನು ರದ್ದುಪಡಿಸಿದೆ.

ಪಿ.ಆರ್. ಸಂಖ್ಯೆ 3/2026 ರಲ್ಲಿ ಹಾಜರು ಪಡಿಸಲಾದ ಎರಡುವರೆ ಅಡಿ ಉದ್ದದ Steel Rod ಮೌಲ್ಯಯುತ ವಸ್ತುವಾದ ಕಾರಣ ಅಪೀಲು ಅವಧಿ

ಮುಗಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಗಿದೆ.

**(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕೀಕರಿಸಿದ್ದು ಸೂಕ್ತ ತಿದ್ದು ಪಡಿಗಳನ್ನು ಮಾಡಿದ ನಂತರ ತೆಗೆದ ನ್ಯಾಯಾಲಯಾದಲ್ಲಿ ದಿನಾಂಕ 27ನೇ ಜುಲೈ 2026 ರಂದು ತೀರ್ಪನ್ನು ಘೋಷಿಸಲಾಯಿತು)**

**Sd/-**
**(ವೆಂಕಟಪ್ಪ ಬಿ.)**
**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ., ಮಧುಗಿರಿ.**

## ಅನುಬಂಧ

**ಅ) ಅಭಿಯೋಜಕರ ಪರ ವಿಚಾರಣೆ ಮಾಡಿರುವ ಸಾಕ್ಷಿಗಳು:**

| | | |
|---|---|---|
| ಪ್ರಾಸಾ-1 | : | ಚೌಡಮ್ಮ ಕೋಂ ರಮೇಶ್ |
| ಪ್ರಾಸಾ-2 | : | ಕಿರಣ್ ಬಿನ್ ರಮೇಶ್ |
| ಪ್ರಾಸಾ-3 | : | ರಾಮ್ ಚರಣ್ ಬಿನ್ ರಾಮಕೃಷ್ಣಪ್ಪ |

**ಆ) ಅಭಿಯೋಜಕರ ಪರ ಗುರುತಿಸಿಕೊಂಡಿರುವ ದಾಖಲೆಗಳು:**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ) | : | ಪ್ರಾಸಾ-1ರವರ ಸಹಿ |
| ನಿಪಿ-2 | : | ಪ್ರಾಸಾ-1ರವರ ಮರು ಹೇಳಿಕೆ |
| ನಿಪಿ-3 | : | ಪ್ರಾಸಾ-2ರವರ ಹೇಳಿಕೆ |
| ನಿಪಿ-4 | : | ಪ್ರಾಸಾ-3ರವರ ಹೇಳಿಕೆ |

**ಇ) ಅಭಿಯೋಜಕರ ಪರ ಗುರುತಿಸಿಕೊಂಡಿರುವ ಮುದ್ದೆ ಮಾಲುಗಳು:**

-ಇಲ್ಲ-

**ಈ) ಆರೋಪಿತರ ಪರ ವಿಚಾರಣೆ ಮಾಡಿರುವ ಸಾಕ್ಷಿಗಳು:**

-ಇಲ್ಲ-

**ಉ) ಆರೋಪಿತರ ಪರ ಗುರುತಿಸಿಕೊಂಡಿರುವ ದಾಖಲೆಗಳುಃ**

-ಇಲ್ಲ-

**Sd/-**
**(ವೆಂಕಟಪ್ಪ ಬಿ.)**
**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಮಧುಗಿರಿ.**